ಶ್ರೀ ಯು. ಭೂಪತಿ.—ಅನ್‌ಸ್ಟಾರ್ಡ್ ಲಿಸ್ಟ್‌ನಲ್ಲಿ ಕ್ವೊಶ್ಚನ್ ಸೇರಿಸಿದ್ದಾರೆ,

ಅಧ್ಯಕ್ಷರು.—ಅದನ್ನೇ ನನ್ನ ಚೇಂಬರಿನಲ್ಲಿ ಬಂದು ಕೇಳಿ. ಇಲ್ಲಿ ಹಾಗೆಲ್ಲ ಕೇಳಬಾರದು. ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ಕೃಷ್ಣನ್.—ಕೋಪ ಮಾಡಿಕೊಳ್ಳಬೇಡಿ. ಸ್ಟಾರ್ಡ್ ಕ್ವೊಶ್ಚನನ್ನು ಅನ್‌ಸ್ಟಾರ್ಡ್ ಕ್ವೊಶ್ಚರ್ ಮಾಡಿಬಿಟ್ಟು.....

ಅಧ್ಯಕ್ಷರು.—ತಾವು ಇಲ್ಲಿ ಕೇಳಬಾರದು. ಏನಾ ಮಾಡಬೇಕೋ ಅಲ್ಲಿ ಕೇಳಿ. ಮಾಡೋಣ.

ಶ್ರೀ ಯು. ಭೂಪತಿ.—ಎಲ್ಲದಕ್ಕೂ ಆಫೀಸಿಗೆ ಬಂದು ನೋಡಿ ಎಂದು ಹೇಳುವುದಾದರೆ ನಾವು ಇಲ್ಲಿ ಏಕೆ ಬರಬೇಕು ?

ಸದಸ್ಯರ ಗೈರುಹಾಜರಿಗೆ ಅನುಮತಿ.

ಅಧ್ಯಕ್ಷರು.—ಆಯಿತು. ಈಗ ಒಂದು ಪ್ರಕಟಣೆ ಇದೆ.

ಅಧ್ಯಕ್ಷರು.—ಶ್ರೀ ಆರ್.ಡಿ. ದೇಸಾಯಿಯವರು ದಿನಾಂಕ.....ರಂದು ಬರೆದ ಪತ್ರವು ನನಗೆ ಬಂದಿದ್ದು ಅದು ಈ ರೀತಿ ಇದೆ, ಶ್ರೀ ಆರ್.ಟಿ. ದೇಸಾಯಿಯವರು ೧೦-೨-೮೬ ರಿಂದ ೧೯-೨-೮೬ರ ತನಕ ಗೈರುಹಾಜರಿರಲು ಅನುಮತಿ ನೀಡುವುದಕ್ಕೆ ಸಭೆಯು ಅಪೇಕ್ಷಿಸುತ್ತದೆಯೇ ?

(ಮಾನ್ಯ ಸದಸ್ಯರಾರೂ ನಿರಾಕರಿಸುವುದಿಲ್ಲ)

ಅಧ್ಯಕ್ಷರು.— ಗೈರುಹಾಜರಾಗಲು ಶ್ರೀ ಆರ್.ಟಿ. ದೇಸಾಯರಿಗೆ ಅನುಮತಿ ನೀಡಲಾಗಿದೆ.

ಶ್ರೀ ಎಸ್. ಬಂಗಾಪ್ಪ.—ಮಾನ್ಯ ಸಭಾಧ್ಯಕ್ಷರೇ,

ಅಧ್ಯಕ್ಷರು.—ಯಾವ ವಿಷಯದ ಬಗ್ಗೆ ಹೇಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಅದನ್ನು ಅಲೋ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಯಾವ ವಿಷಯವನ್ನು ಅಲೋ ಮಾಡುವುದಕ್ಕೆ ಬರುವುದಿಲ್ಲ ಹೇಳಿ ?

ಅಧ್ಯಕ್ಷರು.—ನೀವು ಕೈಲಿ ಹಿಡಿದಿರೋ ಪೇಪರಿನ ವಿಷಯ ಹೇಳುತ್ತೀರಾ ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ —ಹೌದು, ನನ್ನ ಕೈಲಿ ಪೇಪರಿದೆ. ಒಂದೊಂದು ಸಲ ಪೇಪರಿನ ವಿಷಯವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಕ್ಷಮಿಸಿ, ಅಧ್ಯಕ್ಷರೇ, ನಾನು ಮೊದಲೇ ನೋಟಿಸ್ ಕಳುಹಿಸಲಿಕ್ಕಾಗಲಿಲ್ಲ. ಆದರೂ ಈ ವಿಷಯವು ಎಲ್ಲಾ ಪಕ್ಷಗಳಿಗೂ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು.—ತಾವು ಯಾವುದರ ಬಗ್ಗೆ ಮಾತನಾಡುತ್ತಿದ್ದೀರಿ, ಹೇಳಿ ?

ಶ್ರೀ ರಾಜವರ್ಧನ್.—ಸ್ವಾಮಿ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

(ಗೊಂದಲ)

ಅಧ್ಯಕ್ಷರು.—ಇಲ್ಲಿ ಎಲ್ಲರೂ ಕೇಳಿ ? ನಿಮಗೆ ಅವರು ಹೇಳಲಿ, ಅವರಿಗೆ ನೀವು ಹೇಳಿ. ಮಧ್ಯೆ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ನೋಟಿಸ್ ಕೊಡದೆಯೇ ಯಾವ ವಿಷಯವನ್ನೂ ಎತ್ತುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೋಟಿಸ್ ಕೊಟ್ಟು ಎತ್ತಬೇಕಾಗಿತ್ತೆನ್ನುವ ಮಾತನ್ನು ನಾನು ಆಗಲೇ ಹೇಳಿದ್ದೇನೆ.